**<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 612/2019**

| | | | |
|---|---|---|---|
| **ಹೆಸರು** | **:** | **ಮಹಾದೇವಪ್ಪ** | **ಚಾಸಾ. 3** |
| **ತಂದೆಯ ಹೆಸರು** | **:** | **ರಾಮಚಂದ್ರಪ್ಪ** | **ಪ್ರಾ.ಸಾ.  3** |
| **ವಯಸ್ಸು** | **:** | **64 ವರ್ಷ** | **ದಿನಾಂಕಃ 01-10-2024** |
| **ಉದ್ಯೋಗ** | **:** | **ನಿವೃತ್ತ ಮುಖ್ಯ ಅಬಕಾರಿ ಪೇದೆ** | |
| **ವಾಸಸ್ಥಳ** | **:** | **ಸುಲೇಪೇಟ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

2019 ರಲ್ಲಿ ಅಬಕಾರಿ ಕಚೇರಿ ಚಿಂಚೋಳಿಯಲ್ಲಿ ಮುಖ್ಯ ಅಬಕಾರಿ ಪೇದೆಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 11-05-2019 ರಂದು ನಾನು, ಚಾಸಾ 5, ಪಂಚರಾದ ಚಾಸಾ-1 ಮತ್ತು 2 ರವರು ಚತ್ರಸಾಲಾ, ಗಂಗನಪಳ್ಳಿ ರಸ್ತೆಯ ಮದ್ಯದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಒಂದು ಬಜಾಜ ದ್ವಿಚಕ್ರ ವಾಹನದಲ್ಲಿ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ಬಂದಿರುತ್ತಾನೆ. ಸದರಿ ವಾಹನದ ಸಂಖ್ಯೇ KA 32 ER 4488 ಇತ್ತು. ಆಗ ನಮ್ಮ ಅಧಿಕಾರಿಗಳು ಸದರಿ ವಾಹನವನ್ನು ನಿಲ್ಲಿಸಿ ತಪಾಸಣೆ ಮಾಡಿದಾಗ 3 ರಟ್ಟಿನ ಪೆಟ್ಟಿಗೆಗಳಲ್ಲಿ 180 ML ಅಳತೆಯ 40 ರಿಂದ 48 ವಿಸ್ಕಿ ಪ್ಯಾಕೆಟಗಳು ಇದ್ದವು. ಇನ್ನೊಂದು ಪೆಟ್ಟಿಗೆಯಲ್ಲಿ 180 ML ಅಳತೆಯ 48 US ವಿಸ್ಕಿ ಕಾಜಿನ ಬಾಟಲಿಗಳು ಇದ್ದವು. ಅವುಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ 3 ಬಾಟಲಿಗಳನ್ನು ಪ್ರತ್ಯೇಕವಾಗಿ ಜಪ್ತಿ ಮಾಡಿರುತ್ತಾರೆ. ನಂತರ ಚಾಸಾ 5 ರವರು ಜಪ್ತಿ ಪಂಚನಾಮೆ ಮಾಡಿ ಅದನ್ನು ಪಂಚರಿಗೆ ಓದಿ ಹೇಳಿರುತ್ತಾರೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 9-30 ರಿಂದ 10-30 ರವರೆಗೆ ಜರಿಗಿಸಿರುತ್ತಾರೆ. ನಂತರ ವಾಹನ, ಜಪ್ತಿ ಮಾಡಿದ ಮುದ್ದೆಮಾಲುಗಳನ್ನು ಕಚೇರಿಗೆ ತೆಗೆದುಕೊಂಡು ಬಂದು ಪ್ರಕರಣ ದಾಖಲಿಸಿರುತ್ತಾರೆ. ದಿನಾಂಕಃ 15-05-2019 ರಂದು ಘಟನೆ ಬಗ್ಗೆ ಹೇಳಿಕೆ ನೀಡಿದ್ದೇನೆ.

ದಿನಾಂಕಃ 21-05-2019 ರಂದು ಚಾಸಾ 6 ರವರ ಆದೇಶದಂತೆ ಜಪ್ತಿ ಮಾಡಿದ ಮುದ್ದೆಮಾಲುಗಳನು ರಾಸಾಯನಿಕ ಪರೀಕ್ಷೆಗಾಗಿ ರಾಯಚೂರಿಗೆ ತೆಗೆದುಕೊಂಡು ಹೋಗಿರುತ್ತೇನೆ.

ಈಗ ನೋಡುತ್ತಿರುವ ಒಂದು ಕಾಜಿನ ಬಾಟಲಿ ಹಾಗೂ ಮೂರು ಟೆಟ್ರಾ ಪ್ಯಾಕೆಟುಗಳನ್ನು ಸಾಕ್ಷಿ

ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ. 1 ರಿಂದ 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರವಾಗಿ ಶ್ರೀ ASH ವಕೀಲರಿಂದಃ**

ಭಾತ್ಮಿ ಬಂದಾಗ ಬೆಳಿಗ್ಗೆ 9-30 ಗಂಟೆ ಆಗಿತ್ತು. ಕಚೇರಿಯಿಂದ ಎಷ್ಟು ಸಮಯಕ್ಕೆ ಬಿಟ್ಟಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಬೆಳಿಗ್ಗೆ 9-30 ಗಂಟೆಗೆ ಬಿಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಘಟನಾ ಸ್ಥಳಕ್ಕೆ ಹೋದಾಗ ಬೆಳಿಗ್ಗೆ 9-45 ಗಂಟೆ ಆಗಿತ್ತು. ಚತ್ರಸಾಲಾದ ಪಕ್ಕದಲಿ ಗಂಗನಪಳ್ಳಿ ಗ್ರಾಮ ಇದೆ. ಚಿಂಚೋಳಿಯಿಂದ ಹೋಗಬೇಕಾದರೆ ಕುಂಚಾವರಂ ಕ್ರಾಸಿನಲ್ಲಿ ಬಲಭಾಗದಲ್ಲಿ ಹೋದರೆ ಭಕ್ತಂಪಳ್ಳಿ ಗ್ರಾಮ ಬರುತ್ತದೆ ಎಂದರೆ ಸರಿ.  ಭಕ್ತಂಪಳ್ಳಿ ಗ್ರಾಮದಿಂದ ಮುಂದೆ ಹೋದರೆ ಗರಗಪಳ್ಳಿ ಗ್ರಾಮ ಬರುತ್ತದೆ ಎಂದರೆ ಸರಿ. ಗರಗಪಳಿ ಕ್ರಾಸಿನಿಂದ ನೇರವಾಗಿ ಹೋದರೆ ಗಣಾಪುರ ಗ್ರಾಮ ಬರುತ್ತದೆ ಎಂದರೆ ಸರಿ. ಗಣಾಪುರದಿಂದ ನೇರವಾಗಿ ಹೋದರೆ ಬುರುಗಪಳ್ಳಿ ಗ್ರಾಮ ಮತು ಚತ್ರಸಾಲ ಬರುತ್ತದೆ ಎಂದರೆ ಸರಿ. ಮೇಲೆ ಹೇಳಿರುವ ರಸ್ತಯಲ್ಲಿ ಗಂಗನಪಳ್ಳಿ ಗ್ರಾಮ ಹತ್ತುವುದಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ದೂರ ಇದೆ ಎಂದು ನುಡಿಯುತ್ತಾರೆ.

ಆ ದಿನ ನಾವು ಚತ್ರಸಾಲದಿಂದ ಅರ್ಧ ಕಿ.ಮಿ. ದೂರ ನಿಂತಿದ್ದವು. ಚತ್ರಸಾಲ ಮತ್ತು ಬುರುಗಪಳ್ಳಿ ಗ್ರಾಮ ಮದ್ಯದಲ್ಲಿ ನಿಂತಿದ್ದರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1 ನೇ ಆರೋಪಿಯ ವಾಹನವನ್ನು ತಪಾಸಣೆ ಮಾಡುವ ಮೊದಲು ಎಷ್ಟು ವಾಹನಗಳನ್ನು ತಪಾಸಣೆ ಮಾಡಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಬಹಳಷ್ಟು ವಾಹನವನ್ನು ತಪಾಸಣೆ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಆ ದಿನ ತಪಾಸಣೆ ಮಾಡಿದ ವಾಹನಗಳ ಸಂಖ್ಯೇ ಅಥವಾ ವ್ಯಕ್ತಿಗಳ ಹೆಸರು ನನ್ನ ಹೇಳಿಕೆಯಲ್ಲಿ ಉಲ್ಲೇಖವಿಲ್ಲ. ಆ ದಿನ ನಾವು ಯಾವುದೇ ಸ್ಥಳಕ್ಕೆಹೋಗಿರುವುದಿಲ ಮತು ಅಂಕಿ ಸಂಖ್ಯೆಃ ಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಮು.ಮಾ. 1 ರಿಂದ 4 ನ್ನು ರಾಯಚೂರಿಗೆ ತೆಗೆದುಕೊಂಡು ಹೋದ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆ ಪ್ರಕರಣದ ಮುದ್ದೆಮಾಲನ್ನು ಈ ಪ್ರಕರಣದಲ್ಲಿ ಸೇರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಜಪ್ತಿ ಮಾಡದೇ, ಯಾವುದೇ ಪಂಚನಾಮೆ ಮಾಡದೇ ಮತ್ತು ಯಾವುದೇ ಹೇಳಿಕೆ ನೀಡದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರವಾಗಿ ಶ್ರೀ NCH ವಕೀಲರಿಂದಃ**

ನನಗೆ ರೇವಣಸಿದ್ದಪ್ಪ (2 ನೇ ಆರೋಪಿ) ನನಗೆ ಗೊತ್ತಿಲ್ಲ. 2 ನೇ ಆರೋಪಿಗೆ ನಾನು ಈ ಮೊದಲು ನೋಡಿಲ್ಲ. ನನ್ನ ಮೇಲಾಧಿಕಾರಿಗಳ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**